ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 23-01-2024 ರಂದು ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ ಕೆ ಎನ್ ನ್ಯಾಯವಾದಿರವರಿಂದಃ

ಅಸಲು ದಾವೆ ಸಂಖ್ಯೆ 42/2013 ರ ವಾದಿಯಾದ ಆಪಾ ಸೈರೊಬಾ ಗುರವ್ ಇವರ ಪರಿಚಯ ನನಗೆ ಇರುವುದಿಲ್ಲ. ನನಗೆ ನ್ಯಾಯಾಲಯದಿಂದ ಸಾಕ್ಷ್ಯ ನುಡಿಯಲು ಈ ಪ್ರಕರಣದಲ್ಲಿ ಸಮನ್ಸ ಬಂದಿದ್ದು, ನನಗೆ ಸದರಿ ಆಪಾ ಸೈರೊಬಾ ಗುರವ್ ಇವರ ನೋಡಿ ಪರಿಚಯ ಇದ್ದು, ಆದರೆ ಆತ್ಮೀಯತೆ ಇರುವುದಿಲ್ಲ. 2012 ನೇ ಸಾಲಿನಲ್ಲಿ ತಹಶೀಲ್ದಾರ ಕಾರವಾರ ಇವರ ಆರ ಆರ ಟಿ ಪ್ರಕರಣ ಸಂಖ್ಯೆ RRTCR 8/2011-2012 ರಲ್ಲಿ ಸದರಿ ಆಪಾ ಸೈರೊಬಾ ಗುರವ್ ಇವರ ಪರವಾಗಿ ವಕಾಲತ್ ವಹಿಸಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ಈ ಬಗ್ಗೆ ಸದರಿ ಪ್ರಕರಣದ ಆದೇಶದ ಪ್ರತಿಯನ್ನು ತೋರಿಸಲಾಗಿ, ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಡಿ-22 ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ವತಃ ಸದರಿ ಪ್ರಕರಣದಲ್ಲಿ ನಾನು ವಿಲ್ ನಾಮೆಯನ್ನು ಬರೆದಿದ್ದುದರಿಂದ ಸದರಿ ಆಪಾ ಸೈರೊಬಾ ಗುರವ್ ಇವರ ಪರವಾಗಿ ಕಂದಾಯ ನ್ಯಾಯಾಲಯದಲ್ಲಿ ಪ್ರಕರಣವನ್ನು ನೆಡೆಸಿರುತ್ತೇನೆ ಎಂದು ಸಾಕ್ಷಿ ಉತ್ತರಿಸುತ್ತಾರೆ. ತದನಂತರ ಸಹಾಯಕ ಆಯುಕ್ತರ ನ್ಯಾಯಾಲಯದಲ್ಲಿ ಸದರಿ ನಿ.ಡಿ-22 ಪ್ರಕರಣಕ್ಕೆ ಸಂಬಂದಪಟ್ಟಂತೆ ಮೇಲ್ಮನವಿಯನ್ನು ಸಲ್ಲಿಸಿದ್ದು ಇರುತ್ತದೆ ಎಂದರೆ ಸರಿ. ಸಾಕ್ಷಿಗೆ ಸದರಿ ಸಹಾಯಕ ಆಯುಕ್ತರ ನ್ಯಾಯಾಲಯದ ಪ್ರಕರಣ ಸಂಖ್ಯೆ RTSAPCR-03/2012-2013 ರಲ್ಲಿನ ಆದೇಶದ ಪ್ರತಿಯನ್ನು ತೋರಿಸಲಾಗಿ, ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಡಿ-23 ಎಂದು ಗುರುತಿಸಲಾಯಿತು. ಸದರಿ ಪ್ರಕರಣದಲ್ಲಿ ಸಹಾಯಕ ಆಯುಕ್ತರ ಕಾರವಾರ ಇವರ ನ್ಯಾಯಾಲಯದಲ್ಲಿಯೂ ಸಹ ಆಪಾ ಸೈರೊಬಾ ಗುರವ್ ಇವರಿಗೆ ವಿರುದ್ಧವಾಗಿ ತೀರ್ಪು ಬಂದಿರುತ್ತದೆ ಎಂದರೆ ಆ ಬಗ್ಗೆ ನನಗೆ ನೆನಪಿರುವುದಿಲ್ಲ. ವಿಲ್ ನಾಮೆಗೆ ನಾನೇ ಬರಹಗಾರನಾಗಿದ್ದು, ನ್ಯಾಯಾಲಯದಲ್ಲಿ ಪ್ರಕರಣವನ್ನು ನಡೆಸಲು ಬರುವುದಿಲ್ಲ ಎನ್ನುವ ಉದ್ದೇಶದಿಂದ ನಾನು ಈ ನ್ಯಾಯಾಲಯದಲ್ಲಿ ಆತನ ಪರವಾಗಿ ವಕಾಲತ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಿಲ್ ನಾಮೆ ನಿ.ಪಿ-7 ರಲ್ಲಿ ನನ್ನ ಸಮಕ್ಷಮ ಓದಿ ಹೇಳಲಾಗಿದೆ ಎನ್ನುವ ಹಿಂಬರಹವನ್ನು ಉಪನೊಂದಣಾಧಿಕಾರಿಗಳು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ದಸ್ತವೇಜಿನಲ್ಲಿ ಇರುವುದಿಲ್ಲ ಆದರೆ ನೊಂದಾವಣೆ ಪ್ರಕ್ರಿಯೆಯಲ್ಲಿ ಉಪನೊಂದಣಾಧಿಕಾರಿಗಳು ವಿಲ್ ನಾಮೆಯನ್ನು ನೊಂದಣಿ ಮಾಡುವಾಗ ಈ ಬಗ್ಗೆ ಓದಿ ಹೇಳಿ ವಿಷಯವನ್ನು ಮನವರಿಕೆ ಮಾಡಿಕೊಟ್ಟು ನೊಂದಾವಣೆ ಮಾಡಿಕೊಟ್ಟಿರುತ್ತಾರೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಸದರಿ ವಿಲ್ ನಾಮೆಯನ್ನು ಸೈರೊಬಾ ಆಪಾ ಗುರವ್ ಇವರು ನಿ.ಪಿ-7 ರಂತೆ ಮಾಡಿರುತ್ತಾರೆ ಎಂದು ನಾನು



ಆಧರಿಸುವ ಕಾಲಕ್ಕೆ ಅವರಿಗೆ ಸುಮಾರು 90 ವರ್ಷ ವಯಸ್ಸಾಗಿದ್ದು, ಅವರು ಸರಿಯಾಗಿ ಎದ್ದು ಓಡಾಡುವ ಮತ್ತು ದಾಖಲೆಗಳ್ಳು ತಂದುಕೊಡುವ ಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ನಿ.ಪಿ-7 ನ್ನು

ಬರೆಯಲು ಸದರಿ ಅಸಲು ದಾವೆ ಸಂಖ್ಯೆ 42/2013 ರ ವಾದಿಯಾದ ಆಪಾ ಸೈರೊಬಾ ಗುರವ್ ಇತನೇ ನೀಡಿರುತ್ತಾನೆ ಮತ್ತು ದಾಖಲಾತಿಗಳನ್ನು ಸಹ ನೀಡಿರುತ್ತಾನೆ ಎಂದರೆ ಸರಿಯಲ್ಲ. ಸದರಿ ನಿ.ಪಿ–7 ವಿಲ್ ನಾಮೆಯಲ್ಲಿ ಸೈರಬೊ ಆಪಾ ಗುರವ್ ಇವರ 2 ನೇ ಮಗನಾದ ಮನೋಹರ ಮೃತ ಎಂದು ನಮೂದಿಸಿದ್ದು, ಆತನ ವಾರಸುದಾರರ ಬಗ್ಗೆ ಎಲ್ಲಿಯೂ ನಿ.ಪಿ–7 ರಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ. ಒಂದುವೇಳೆ ನಾನು ಆಧರಿಸುವಂತೆ ಶ್ರೀ ಸೈರೊಬಾ ಆಪಾ ಗುರವ್ ಇವರೇ ನಿ.ಪಿ–7 ವಿಲ್ ನಾಮೆಯನ್ನು ತಯಾರಿಸಲು ಮಾಹಿತಿಯನ್ನು ಕೊಟ್ಟಿದ್ದರೆ ನಾನು ಮೃತ ಮನೋಹರ ವಾರಸುದಾರರ ಬಗ್ಗೆ ವಿಲ್ ನಾಮೆಯಲ್ಲಿ ನಮೂದಿಸುತ್ತಿದ್ದೆನು ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಸೈರೊಬಾ ಆಪಾ ಗುರವ್ ಯಾವ ಮಾಹಿತಿಯನ್ನು ನೀಡಿರುತ್ತಾನೆಯೊ ಅದನ್ನು ಆಧರಿಸಿ ನಿ.ಪಿ–7 ನ್ನು ತಯಾರಿಸಿರುತ್ತೇನೆ ಎಂದು ಸಾಕ್ಷ್ಯನುಡಿಯುತ್ತಾರೆ. ನಿ.ಪಿ–7 ನ್ನು ತಯಾರಿಸುವ ಕಾಲಕ್ಕೆ ನಾನು ಮತ್ತು ಸದರಿ ಆಪಾ ಸೈರೊಬಾ ಗುರವ ಸೇರಿಕೊಂಡು ವಿಲ್ ನಾಮೆಯನ್ನು ತಯಾರಿಸಿ ನೇರವಾಗಿ ಉಪನೊಂದಣಾಧಿಕಾರಿಗಳ ಕಚೇರಿಗೆ ಹೋಗಿರುತ್ತೆವೆ ಎಂದರೆ ಸರಿ. ಸೈರೊಬಾ ಆಪಾ ಗುರವ್ ಇವರಿಗೆ ಕನ್ನಡ ಓದಲು ಬರೆಯಲು ಹಾಗೂ ತಿಳಿದುಕೊಳ್ಳಲು ಬರುತ್ತಿರಲಿಲ್ಲ ಕಾರಣ ಅವರು ಕೊಂಕಣಿ ಭಾಷೆ ಮಾತ್ರ ಬಲ್ಲವರಾಗಿದ್ದರು ಎಂದರೆ ಸರಿಯಲ್ಲ. ಸೈರೊಬಾ ಆಪಾ ಗುರವ್ ಇವರಿಗೆ ವಯೊಸಹಜ ನೆನಪಿನ ಶಕ್ತಿ ಸಾಮರ್ಥ್ಯ ಕಡಿಮೆ ಇದ್ದುದರಿಂದ ನಿ.ಪಿ–7 ನ್ನು ಬರೆಯಲು ನನಗೆ ವಿವರಿಸುವಷ್ಟು ಸಾಮರ್ಥ್ಯ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಆಪಾ ಸೈರೊಬಾ ಗುರವ್ ಇತನು ನನ್ನ ಈ ಹಿಂದಿನ ಕಕ್ಷಿಗಾರರನಾಗಿದ್ದುದರಿಂದ ಆತನಿಗೆ ಸಹಾಯ ಮಾಡುವ ಉದ್ದೇಶದಿಂದ ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ಆತನ ದಾವೆಗೆ ಪೂರಕವಾಗಿ ಸುಳ್ಳು ವಿಷಯಗಳನ್ನು ನಮೂದಿಸಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

**ಸಹಿ ಇದೆ .**

**ಸಿವಿಲ್ ನ್ಯಾಯಾಧೀಶರು ಕಾರವಾರ**